# ಶ್ರೀ ರಾಮಕೃಷ್ಣ ಗೃಹ ನಿರ್ಮಾಣ ಸಹಕಾರ ಸಂಘ ನಿ,(ದಕ್ಷಿಣ)ಮೈಸೂರು

ಶ್ರೀ ಲಕ್ಷ್ಮಿ ನರಸಿಂಹ ಕಾಂಪ್ಲೆಕ್ಸ್, ನಂ. 40/1, 4 ನೇ ಮೇನ್ ರೋಡ್, ವಿ.ವಿ. ಮೊಹಲ್ಲಾ, ಮೈಸೂರು-570 002
ಫೋನ್ ನಂ. : 2411119, 2411130

ದಿ: 11/03/2016

## ತಿಳುವಳಿಕೆ ಪತ್ರ

**ಕಛೇರಿ ವೇಳೆ: 10.00 ರಿಂದ 2.00**
**4.00 ರಿಂದ 7.00**
**ಭಾನುವಾರ ರಜೆ**

ಮಾನ್ಯ ಸದಸ್ಯರೆ,

ವಿಷಯ: ಮೈಸೂರು ನಗರಾಬಿವೃದ್ಧಿ ಪ್ರಾಧಿಕಾರಕ್ಕೆ ನಕ್ಷೆ ಅನುಮೋದನೆಗಾಗಿ ಹಣ ಪಾವತಿಸಿರುವ ಬಗ್ಗೆ ಮತ್ತು ನಿವೇಶನದ ಅಂತಿಮ ದರ ನಿರ್ದರಿಸುವ ಬಗ್ಗೆ ಚರ್ಚಿಸಲು ತಾ: **25-03-2016** ರಂದು ಸಭೆ ಕರೆಯಲಾಗಿದೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮಗೆಲ್ಲಾ ಈಗಾಗಲೇ ತಿಳಿದಿರುವಂತೆ ಸಂಘದ ಪರವಾಗಿ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕೆ.ಹೆಮ್ಮನಹಳ್ಳಿ ಮತ್ತು ಹುಯಿಲಾಳು ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಸತಿ ಬಡಾವಣೆಯ 33 ಎಕರೆ ಪ್ರದೇಶದ ನಕ್ಷೆಯು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಗೊಂಡಿದ್ದು, ನಕ್ಷೆ ಅನುಮೋದನೆಯ ಶುಲ್ಕ ರೂ.1,42,73,700/- ಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪಾವತಿಸಲಾಗಿದೆ. ಈ ಬಗ್ಗೆ ವಿವರವಾಗಿ ಚರ್ಚೆ ನಡೆಸಲು ಮತ್ತು ನಿವೇಶನದ ಅಂತಿಮ ದರ ನಿರ್ಧಾರ ಮಾಡಲು ದಿನಾಂಕ 25-03-2016 ರಂದು ಬೆಳಿಗ್ಗೆ **10.00** ಘಂಟೆಗೆ ಮೈಸೂರು ನಗರ, ಜೆ.ಎಲ್.ಬಿ.ರಸ್ತೆಯ ತುಳಸಿದಾಸಪ್ಪ ಆಸ್ಪತ್ರೆಯ ಎದುರು ಇರುವ **"ಶ್ರೀ ನಾಧಬ್ರಹ್ಮ ಸಂಗೀತ ಸಭಾಂಗಣದಲ್ಲಿ"** ಕೆ.ಹೆಮ್ಮನಹಳ್ಳಿ ಮತ್ತು ಹುಯಿಲಾಳು ಗ್ರಾಮದ ಬಡಾವಣೆಯಲ್ಲಿ ನಿವೇಶನ ಹೊಂದಲು ಇಚ್ಚಿಸಿ ನಿವೇಶನ ಮುಂಗಡ ಪಾವತಿಸಿರುವ ಸದಸ್ಯರುಗಳನ್ನು ಮಾತ್ರ ಸಭೆಗೆ ಕರೆಯಲಾಗಿದೆ. ವಿಷಯದ ಬಗ್ಗೆ ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಕೋರಿದೆ.

ಬಡಾವಣೆ ಅಭಿವೃದ್ಧಿಗಾರರಾದ ಮೆ॥ ಸ್ಕಿಲ್‌ಟೆಕ್ ಇಂಜಿನಿಯರ್ಸ್ ಅಂಡ್ ಕಂಟ್ರಾಕ್ಟರ್ಸ್ ಪ್ರೈ. ಲಿ., ರವರು ದಿನಾಂಕ:14-12-2015ರ ಪತ್ರದ ಸಂಖ್ಯೆ SK/SRHBCS/15-16/1700 ರಲ್ಲಿ ವಿವರವಾಗಿ ಬಡಾವಣೆ ಅಭಿವೃದ್ಧಿ ಕಾರ್ಯವು ವಿಳಂಬಗೊಂಡಿರುವುದಕ್ಕೆ ಕಾರಣಗಳನ್ನು ತಿಳಿಸುತ್ತಾ ಸಂಘದ ವತಿಯಿಂದ ಬಡಾವಣೆ ಅಭಿವೃದ್ಧಿಗಾಗಿ ಕರಾರು ಒಪ್ಪಂದ ಮಾಡಿಕೊಂಡ ನಂತರ ಮೈಸೂರು ನಗರದಲ್ಲಿ ವಸತಿ ನಿವೇಶನಗಳಿಗೆ ಉಂಟಾದ ಭಾರಿ ಬೇಡಿಕೆ, ಇದರಿಂದ ಕೃಷಿ ಜಮೀನಿನ ಬೆಲೆಗಳಲ್ಲಿ ತೀವ್ರ ಏರಿಕೆಯಾದದ್ದು, ಪಟಭದ್ರ ಹಿತಾಸಕ್ತಿಯ ಜನಗಳು ಈಗಾಗಲೇ ಕ್ರಯದ ಒಪ್ಪಂದ ಮಾಡಿಕೊಂಡ ಭೂಮಾಲೀಕರೊಂದಿಗೆ ಶಾಮೀಲಾಗಿ ಕ್ರಯ ಪತ್ರ ಮಾಡಿಕೊಡದಂತೆ ತಡೆಹಿಡಿದಿರುವುದು, ಹೀಗಾಗಿ ಒಂದೇ ಪ್ರದೇಶದಲ್ಲಿ 50 ಎಕರೆ ಜಮೀನನ್ನು ಭೂ-ಸ್ವಾಧೀನ ಮಾಡಿಕೊಳ್ಳುವುದರಲ್ಲಿ ಆದ ವಿಳಂಬ, ಜಮೀನುಗಳ ವ್ಯವಹಾರದಲ್ಲಿ ಹೆಚ್ಚಿದ ವ್ಯಾಜ್ಯ / ದಾವೆಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಪೂರ್ವಾನ್ವಯವಾಗುವಂತೆ ಹಿಂದೂ ಕುಟುಂಬದಲ್ಲಿ ಹೆಣ್ಣು ಮಕ್ಕಳಿಗೂ ಕೂಡ ಸಮಾನ ಆಸ್ತಿಯ ಹಕ್ಕಿನ ತೀರ್ಪಿನಿಂದಾದ ಭಾಗಂಶ ದಾವೆಗಳು, ಈ ರೀತಿಯ ಹೆಚ್ಚಿನ ದಾವೆಗಳಿಂದಾಗಿ ಕೂಲಂಕುಶವಾಗಿ ದಾಖಲಾತಿ ಪರಿಶೀಲನೆ ಮತ್ತು ವಾರ್ತಾ ಪತ್ರಗಳಲ್ಲಿ ಆಕ್ಷೇಪಣೆ ಕೋರಿ ಜಾಹಿರಾತು ಪ್ರಕಟಣೆ ಮತ್ತು ಆಕ್ಷೇಪಣೆಗಳ ಬಗ್ಗೆ ಕೂಲಂಕುಶ ಪರಿಶೀಲನೆಗಾಗಿ ಹೆಚ್ಚಿನ ಸಮಯ, ಭೂ-ದಾಖಲಾತಿಗಳಾದ RTC, 11E ನಕ್ಷೆ, ಜಂಟಿ ನಕ್ಷೆ ಆಕಾರ್‌ಬಂದ್, ಮ್ಯುಟೇಶನ್, PTCL, ಅನುಮತಿ, NTC ಇತ್ಯಾದಿಗಳನ್ನು ಪಡೆಯುವಲ್ಲಿ ಅಗುತ್ತಿರುವ ವಿಳಂಬವನ್ನು ವಿಶದವಾಗಿ ವಿವರಿಸಿರುತ್ತಾರೆ.

ಈ ರೀತಿಯ ವಿಳಂಬವು ಅನಿವಾರ್ಯ ನಿರ್ಬಂದಕ್ಕೆ (Force Majure) ಒಳಪಟ್ಟಿದ್ದು, ಸಂಘದೊಂದಿಗೆ ಏರ್ಪಟ್ಟಿರುವ ಕರಾರಿನನ್ವಯ ಈ ರೀತಿಯ ವಿಪರೀತದ ಸನ್ನಿವೇಶಗಳಿಗಾಗಿ ಕಾಲವಕಾಶ ವಿಸ್ತರಣೆಗೆ ಅವಕಾಶವಿರುತ್ತದೆ.

ಮುಂದುವರೆಯುತ್ತಾ, ಮೆ॥ ಸ್ಕಿಲ್‌ಟೆಕ್ ಇಂಜಿನಿಯರ್ಸ್ ಅಂಡ್ ಕಂಟ್ರಾಕ್ಟರ್ಸ್ ಪ್ರೈ. ಲಿ., ಸಂಸ್ಥೆಯು ಸಂಘದೊಡನೆ ಈ ಹಿಂದೆ ನಡೆಸಿರುವ ಅನೇಕ ಪತ್ರವ್ಯವಹಾರಗಳನ್ನು ಉಲ್ಲೇಖಿಸುತ್ತಾ, ಜಮೀನಿನ ಬೆಲೆಯಲ್ಲಿ ಉಂಟಾದ ಭಾರಿ ಹೆಚ್ಚಳ ಕೋರ್ಟ್ ಮೆಟ್ಟಿಲೇರಿದ ದಾವೆ ವ್ಯಾಜ್ಯಗಳಾನ್ನು ರಾಜಿ ಪಾತ್ರದಲ್ಲಿ ಪರಿಹರಿಸಿಕೊಳ್ಳಲು ನೀಡಲಾದ ಹೆಚ್ಚಿನ ಪರಿಹಾರ, ಆನೇಕ ಕಾರಣಗಳಿಂದಾಗಿ ಹೆಚ್ಚಿದ ಸಂಪರ್ಕ ಹಾಗೂ ಬಾಂದವ್ಯದ ಖರ್ಚುಗಳು, ಶಾಸನಬದ್ಧ ಸಂಸ್ಥೆಗಳಲ್ಲಿ ಹೊಸದಾಗಿ ವಿಧಿಸಲಾಗುತ್ತಿರುವ ಶುಲ್ಕಗಳು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಡಾವಣೆ ನಕ್ಷೆ ಅನುಮೋದನೆ ಹಾಗೂ ನಿವೇಶನಗಳ ಬಿಡುಗಡೆಯಲ್ಲಿ ಆಗಿರುವ ಮಾರ್ಪಾಡಿನಿಂದ ಉಂಟಾಗುತ್ತಿರುವ ಅಧಿಕ ಖರ್ಚು, ಸಿವಿಲ್, ವಿದ್ಯುತ್ತೀಕರಣ, ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಸ್ಪೆಸಿಫಿಕೇಶನ್‌ನಲ್ಲಿ ಮಾಡಲಾಗಿರುವ ಮಾರ್ಪಡಿನಿಂದಾದ ಉಂಟಾಗಿರುವ ಅಧಿಕ ಖರ್ಚು, ಕಾಮಗಾರಿಯ ಕಚ್ಚಾ ಪದಾರ್ಥಗಳಾದ ಮರಳು, ಸಿಮೆಂಟ್ ಇತ್ಯಾದಿ ಮತ್ತು ಕೂಲಿ ದರಗಳಲ್ಲಿ ಆಗಿರುವ ಹೆಚ್ಚಳ ಇತ್ಯಾದಿಗಳನ್ನು ವಿವರವಾಗಿ ತಿಳಿಸುತ್ತಾ ಬಡಾವಣೆ ಅಭಿವೃದ್ಧಿಯ ಅಂತಿಮ ದರವನ್ನು ಚದರ ಮೀಟರ್ ಒಂದಕ್ಕೆ ಈಗಿರುವ ದರ ರೂ.2828 (263) ರಿಂದ ರೂ.5193 (483) ಪರಷ್ಕರಿಸಿಕೊಡಬೇಕೆಂದು ಕೋರಿರುತ್ತಾರೆ.

ಗುತ್ತಿಗೆದಾರರನ್ನು ಸಂಘದ ಆಡಳಿತ ಮಂಡಳಿ ಸಭೆಗೆ ತಾ:23-01-2016 ರಂದು ನಡೆಯುವ ಆಡಳಿತ ಸಭೆಗೆ ಚರ್ಚೆಗೆ ಬರುವಂತೆ ತಾ: 14-01-2016 ರಂದು ಅವರಿಗೆ ಪತ್ರ ಬರೆಯಲಾಯಿತು. ಅದಕ್ಕೆ ಗುತ್ತಿಗೆದಾರರು ಆಡಳಿತ ಮಂಡಳಿ ಸಭೆಗೆ ಸಮಯಕ್ಕೆ ಸರಿಯಾಗಿ ಸಭೆಗೆ ಹಾಜರಾಗಿ, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರುಗಳು ಗುತ್ತಿಗೆದಾರರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ ನಂತರ ಗುತ್ತಿಗೆದಾರರು ಕೇಳಿರುವ ಹೆಚ್ಚಿನ ಮೊತ್ತ ಒಂದು ಚದರ ಅಡಿಗೆ ರೂ.220/- ರೂಪಾಯಿಗಳಾಗಿದ್ದು, ಈ ಮೊತ್ತವು ಅತೀ ಹೆಚ್ಚಳವಾಗಿದೆ ಎಂದು ಆಡಳಿತ ಮಂಡಳಿ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ನಡೆಯಿತು. ನಂತರ ಗುತ್ತಿಗೆದಾರರು ಒಂದು ಚದರ ಅಡಿಗೆ ರೂ.15/- ರೂಪಾಯಿಗಳನ್ನು ಕಡಿಮೆ ಮಾಡುತ್ತೇವೆ ಎಂದು ಆಡಳಿತ ಮಂಡಳಿ ಸಭೆಗೆ ತಿಳಿಸಿದರು. ಇದಕ್ಕೆ ಒಪ್ಪದ ನಮ್ಮ ಸಂಘದ ಆಡಳಿತ ಮಂಡಳಿಯವರು ಇದು ಸಹ ನಮ್ಮ ಸದಸ್ಯರಿಗೆ ಅತಿ ಹೆಚ್ಚಳವಾಗಿರುತ್ತದೆ ಎಂದು ಪುನ: ಚರ್ಚಿಸಲಾಯಿತು. ಆದರೆ ಇದಕ್ಕೆ ಮಡಿಯದ ಗುತ್ತಿಗೆದಾರರು ಇದಕ್ಕಿಂತ ಕಡಿಮೆ ಮಾಡಿ ಬಡಾವಣೆಯನ್ನು ನಿರ್ಮಿಸಿಕೊಡಲು ಸಾಧ್ಯವೇ ಇಲ್ಲ ಎಂದು ತಿಳಿಸಿದರು. ಅದಕ್ಕೆ ನಮ್ಮ ಎಲ್ಲಾ ನಿರ್ದೇಶಕರುಗಳು ಇನ್ನೊಂದು ಸಭೆಯನ್ನು ಕರೆದು ಅಂತಿಮವಾಗಿ ತೀರ್ಮಾನ ಕೈಗೊಳ್ಳಬಹುದೆಂದು ಚರ್ಚಿಸಲಾಯಿತು.

ಮತ್ತು ತಾ:27-02-2016ನೇ ಶುಕ್ರವಾರದಂದು ನಡೆಯುವ ಆಡಳಿತ ಮಂಡಳಿ ಸಭೆಗೆ ಬರುವಂತೆ ತಾ:17/02/2016 ರಂದು ಗುತ್ತಿಗೆದಾರಾರಿಗೆ ಸಂಘದಿಂದ ಪತ್ರ ಬರೆಯಲಾಯಿತ್ತು, ಅದಕ್ಕೆ ಗುತ್ತಿಗೆದಾರಾರು ಆಡಳಿತ ಮಂಡಳಿ ಸಭೆಗೆ ಸಮಯಕ್ಕೆ ಸರಿಯಾಗಿ ತಾ: 27-02-2016 ರಂದು ಸಂಜೆ 5.00 ಘಂಟೆಗೆ ಸಭೆಗೆ ದರ ಪರಿಷ್ಕರಣೆ ಮಾಡಲು ಪುನ: ಹಾಜರಾಗಿ ಚರ್ಚೆಯಲ್ಲಿ ಪಾಲ್ಗೊಂಡಿರುತ್ತಾರೆ. ಸಭೆಯಲ್ಲಿ ದರ ಪರಿಷ್ಕರಣೆ ಬಗ್ಗೆ ಪುನ: ಚರ್ಚಿಸಲಾಗಿ ನಂತರ ಗುತ್ತಿಗೆದಾರರು ಒಲ್ಲದ ಮನಸ್ಸಿನಿಂದ ಆಡಳಿತ ಮಂಡಳಿ ಸಭೆಯ ಒತ್ತಡದಿಂದ ಪುನ: ಒಂದು ಅಡಿಗೆ 5/- ರೂಪಾಯಿಗಳನ್ನು ಕಡಿಮೆ ಮಾಡಲು ಒಪ್ಪಿಕೊಂಡಿರುತ್ತಾರೆ. ಆದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳು ಗುತ್ತಿಗೆದಾರರೊಡನೆ ದಯಾಮಾಡಿ ಇನ್ನೂ ಚದರ ಅಡಿಗೆ 15 ರೂಪಾಯಿಗಳನ್ನು ಕಡಿತಗೊಳ್ಳಿಸಬೇಕೆಂದು ತಮಗೆ ಒಂದು ಚದರ ಅಡಿಗೆ 450/- ರೂಪಾಯಿಗಳಂತೆ ಬರುತ್ತದೆ. ಅದರಿಂದ ತಾವು ದಯಮಾಡಿ ನಮ್ಮ ಮನವಿಯನ್ನು ಸ್ವೀಕರಿಸಬೇಕೆಂದು ಆಡಳಿತ ಮಂಡಳಿಯಲ್ಲಿ ಕೇಳಿಕೊಳ್ಳಲಾಯಿತು.

ಆದರೆ ಗುತ್ತಿಗೆದಾರರು ತಮ್ಮ ಒತ್ತಡಕ್ಕೆ ಮಣಿದು ಎರಡು ಸಭೆಯಿಂದ ಒಟ್ಟು ಒಂದು ಚದರ ಅಡಿಗೆ 20/- ರೂಪಾಯಿಗಳಂತೆ ಕಡಿಮೆ ಮಾಡಿರುತ್ತೇವೆ. ಅದರಿಂದ ಇನ್ನೂ ಕಡಿಮೆ ಮಾಡಲು ಸಾಧ್ಯವೇ ಇಲ್ಲ ಎಂದು ಸಭೆಗೆ ತಿಳಿಸಿದರು. ಆದ್ದರಿಂದ ಗುತ್ತಿಗೆದಾರರ ಎದುರಿನಲ್ಲೇ ಕೂಲಂಕುಶವಾಗಿ ಚರ್ಚಿಸಿ ಮುಂದಿನ ದಿನಗಳಲ್ಲಿ ದಿನಾಂಕವನ್ನು ನಿಗಧಿಪಡಿಸಿ ಸದಸ್ಯರನ್ನು ಕರೆದು ಗುತ್ತಿಗೆದಾರರು ಮತ್ತು ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರುಗಳು ಒಂದೆಡೆ ಸೇರಿ ಗುತ್ತಿಗೆದಾರರೊಡನೆ ಸದಸ್ಯರುಗಳೇ ಚರ್ಚಿಸಿ ತೀರ್ಮನಕ್ಕೈಗೊಳ್ಳಬೇಕೆಂದು ಅಂತಿಮವಾಗಿ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಯಿತು. ಸಭೆಯಲ್ಲಿ ಕಾರ್ಯದರ್ಶಿಯವರಿಗೆ ಸದಸ್ಯರುಗಳಿಗೆ ದಿನಾಂಕವನ್ನು ರಜೆ ದಿನದಂದು ನಿಗಧಿಪಡಿಸಿ, ತಿಳುವಳಿಕೆ ಪತ್ರವನ್ನು ಕಳುಹಿಸಬೇಕೆಂದು ಆದೇಶ ನೀಡಲಾಯಿತು.

ವಂದನೆಗಳೊಂದಿಗೆ,

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

ಕಾರ್ಯದರ್ಶಿ

ವಿಶೇಷ ಸೂಚನೆ: ಸದಸ್ಯರೆಲ್ಲ ವಿನಂತಿ ತಮಗೆ ಈ ಸಭೆಗೆ ಬರಲು ಸಾಧ್ಯವಾಗದಿದ್ದಲ್ಲಿ ದೂರವಾಣಿ ಮೂಲಕ ಕಛೇರಿಗೆ ತಾ:೨೩/೦೩/೨೦೧೬ರ ಒಳಗಾಗಿ ತಿಳಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.